

ನಡೆಯಲು ಅನುಕೂಲವಾಗುವಂತೆ ನೆಲದಿಂದ ಎತ್ತರಕ್ಕೆ ಕಟ್ಟಿಗೆಯಿಂದ ಮಾಡಿದ ಸೇತುವೆಯ ಕಾಲುದಾರಿ. ನಿರಂತರವಾಗಿ ಮಳೆಯಾಗುವ ಈ ಪ್ರದೇಶದಲ್ಲಿ ನಡೆದುಕೊಂಡು ಹೋಗುವಾಗ ಉಂಬಳದ ಕಾಟ, ಚಿಕ್ಕ ತೊರೆಗಳನ್ನು ದಾಟುವಾಗ ತೊಂದರೆ ಆಗದಿರಲೆಂದು ನೆಲದಿಂದ ಎತ್ತರಕ್ಕೆ ಈ ಕಾಲುದಾರಿಯನ್ನು ನಿರ್ಮಿಸಿದ್ದಾರೆ. ಕೆಳಗಡೆ ತಂಪು ನೀರಿನ ಜವುಗು ಪ್ರದೇಶ, ಅಲ್ಲಲ್ಲಿ ಹರಿಯುವ ತೊರೆಗಳು, ಮರಗಳನ್ನು ತಬ್ಬಿಕೊಂಡ ವಿವಿಧ ರೀತಿಯ ಬಳ್ಳಿಗಳು, ಪ್ರಶಾಂತತೆಯನ್ನು ಭೇದಿಸುವ ಕೀಟಗಳ ಶಬ್ದಗಳು.

ದಶಕಗಳ ಹಿಂದಿನ ಉತ್ತರ ಕನ್ನಡದ ಯಾಣಕ್ಕೆ ಹೋಗುವ



ದಾರಿ ನೆನಪಿಗೆ ಬಂತು. ಅಲ್ಲೀಗ ಪ್ರವಾಸಿಗರ ಅನುಕೂಲಕ್ಕಾಗಿ ರಸ್ತೆ ಮಾಡಿ ವಾಹನ ಸೌಕರ್ಯವನ್ನು ಕಲ್ಪಿಸಿ ಕಾಡಿನ ನಡುವೆ ನಡೆಯುವ ಅನುಭವವನ್ನೇ ಇಲ್ಲವಾಗಿಸಲಾಗಿದೆ. ಅಭಿವೃದ್ಧಿ ಎಂದರೆ ಪ್ರಕೃತಿಯಿಂದ ದೂರಹೋಗುವುದೆಂಬ ನಂಬಿಕೆ ನಮ್ಮದು. ನಿಹಾ ಗುಹೆಗಳಿಗೆ ಹೋಗಲು ಕಾಡನ್ನು ಕಡಿದು ರಸ್ತೆ ಮಾಡದಿರುವ ಮಲೇಷ್ಯಾ ಸರ್ಕಾರದ ನಿರ್ಧಾರದ ಬಗ್ಗೆ ಮೆಚ್ಚುಗೆಯೆನ್ನಿಸಿತು.

ಮೊಟ್ಟಮೊದಲು ಸಿಗುವ ಗುಹೆಗಳು 'ವ್ಯಾಪಾರಿ ಗುಹೆಗಳು'. ಗುಹೆಗಳಲ್ಲಿನ ಹಕ್ಕಿಗಳ ಗೂಡನ್ನು ಕಿತ್ತು ತಂದು ಮಾರಾಟ ಮಾಡುತ್ತಿದ್ದ ಸ್ಥಳವಾದುದರಿಂದ ಈ ಹೆಸರು ಬಂದಿದೆ. ಈ ಗೂಡುಗಳಿಂದ ಮಾಡುವ ಅಡುಗೆ, ಸಾರು ಬಹಳ ರುಚಿಕರವಾದದ್ದು ಎಂದು ಪ್ರತೀತಿ. ರಾಷ್ಟ್ರೀಯ ಉದ್ಯಾನ ಎಂದು ಘೋಷಣೆ ಆದ ನಂತರ ಗೂಡುಗಳನ್ನು ಕೀಳುವುದನ್ನು, ಮಾರುವುದನ್ನು ಸರ್ಕಾರ ನಿಷೇಧಿಸಿದೆ. ವ್ಯಾಪಾರಿ ಗುಹೆಗಳನ್ನು ದಾಟಿ ಮುಖ್ಯ ಗುಹೆಯನ್ನು ಪ್ರವೇಶಿಸುತ್ತಿದ್ದಂತೆಯೇ ಅದರ ಅಗಾಧತೆಯ ಅರಿವಾಯಿತು. 300 ಅಡಿ ಎತ್ತರ ಮತ್ತು 600 ಅಡಿ ಅಗಲವಿರುವ ಈ ಬೃಹತ್ ಗುಹೆಯ ಆಕಾರವೇ ನೋಡುಗರನ್ನು ದಂಗು ಬಡಿಸುತ್ತದೆ!

ದಟ್ಟ ಕಾನನದ ನಡುವೆ ಈ ಗುಹೆಗಳ ಇರುವಿಕೆಯನ್ನು ಪತ್ತೆ ಹಚ್ಚಿ ಅದರ ಉತ್ಖನನವನ್ನು ಮಾಡಿದ್ದು ಟಾಮ್ ಹ್ಯಾರಿಸನ್ ಎಂಬ ಪುರಾತತ್ವ ಶಾಸ್ತ್ರಜ್ಞ. ನಲವತ್ತು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಈ ಗುಹೆಗಳಲ್ಲಿ, ಸಾವಿರಾರು ವರ್ಷಗಳ ಹಿಂದಿನ ಅಸ್ಥಿಪಂಜರ ಪತ್ತೆಯಾಗಿದೆ. ಶಿಲಾಯುಗದ ಮನುಷ್ಯನ ಕುರುಹುಗಳನ್ನು ಏಷ್ಯಾಖಂಡದಲ್ಲಿ ಮೊದಲು ಪತ್ತೆಯಾಗಿರುವುದು ಈ ಗುಹೆಗಳಲ್ಲಿ. ಇಪ್ಪತ್ತು ಎಕರೆ ಪ್ರದೇಶದಲ್ಲಿ ಹರಡಿರುವ ಈ ವಿಶಾಲವಾದ ಗುಹೆಗಳಿಗೆ ಐದು ಮುಖಗಳಿವೆ. ಈ ಗುಹೆಗಳು ಹಿಂದೊಮ್ಮೆ ಸಾಗರದ ಆಳದಲ್ಲಿದ್ದುದರ ಕುರುಹುಗಳನ್ನು ಕಾಣಬಹುದಾಗಿದೆ. ಹತ್ತು ಲಕ್ಷ ವರ್ಷಗಳ ಹಿಂದೆ ಸಮುದ್ರದಿಂದ ಹೊರಬಂದ ಈ ಗುಹೆಗಳನ್ನು ನೋಡುವುದೇ ಒಂದು ವಿಶೇಷ ಅನುಭವ!

ಗುಹೆಯೊಳಗಡೆ ಕಲ್ಲಿನ ಮೇಲೆ ಚಿತ್ರಗಳನ್ನು ಕಾಣಬಹುದು. ಇಲ್ಲಿ ಮನುಷ್ಯರು ಹೇಗೆ ಬದುಕಿದ್ದರು, ಶತಮಾನಗಳಿಗೂ ಮೀರಿ ಅವರು ಈ ಗುಹೆಗಳಲ್ಲಿ ಹೇಗೆ ಜೀವನ ಮಾಡಿದ್ದರು ಎಂಬುದು ವಿಸ್ಮಯದ ಸಂಗತಿಯಾಗಿದೆ. ವಿಚಿತ್ರ ಎಂದರೆ, ನಾನು ಈ ಗುಹೆಗಳನ್ನು ನೋಡಲು ಹೋದಾಗ ಅಲ್ಲಿದ್ದುದು ಕೇವಲ ಎಂಟ್ಹತ್ತು ಪ್ರವಾಸಿಗರು ಮಾತ್ರ.

ನಿಹಾ ಗುಹೆಗಳ ಪರಿಸರವನ್ನು ಅತ್ಯಂತ ಸ್ವಚ್ಛವಾಗಿ ಉಳಿಸಿಕೊಳ್ಳಲಾಗಿದೆ. ಕಸ–ಪ್ಲಾಸ್ಟಿಕ್ ಗಲೀಜಿನಿಂದ ಮುಕ್ತವಾಗಿರುವ ಗುಹೆಗಳನ್ನು ನೋಡುವುದೇ ಒಂದು ಸಂತೋಷದ ಅನುಭವ. ಮನುಕುಲದ ಇತಿಹಾಸವನ್ನು ಹೇಳುವ ಈ ಗುಹೆಗಳು ನಿಜಕ್ಕೂ ವಿಶ್ವದ ಪರಂಪರೆಯಾಗಿದೆ. ಆದರೂ, ನಿಹಾ ಗುಹೆಗಳನ್ನು ಇಲ್ಲಿಯವರೆಗೆ ವಿಶ್ವಪರಂಪರೆಯ ತಾಣವನ್ನಾಗಿ ಗುರುತಿಸದಿರುವುದೇ ಸೋಜಿಗ.